

## ಕವಿತೆ




ಭಾಗ್ಯಜ್ಯೋತಿ ಹಿರೇಮಠ

ಕಲೆ: ಎಸ್.ವಿ. ಹೂಗಾರ್


# ಕುಂದದ ಬೆಳಗು

ಒಂದು ಕಸುವಿನ ದನಿ ಗಾಢ ನಿದ್ರೆಯಲ್ಲೂ
ತೀರದ ಹಸಿವಂತೆ ಕಾಡುತ್ತಿತ್ತು
ಮಂದಾದಮೈಗೆ ಸ್ಯಾವಂತಿಗೆ ಬೆಳಕಂತೆ
ಮೆರವಣಿಗೆ ಹೊರಟ ಚುಕ್ಕಿಯೊಂದು ಕುಣಿತಿತ್ತು

ಭವ–ಭವದ ತಾಯಿ, ಗೆಳತಿ, ದೇವಿಯಂಬಂತವಳ
ನುಣುಪು ಪಾದ ಝುಗಝುಗಿಸುತ್ತಿತ್ತು
ಹಸಿಎಲೆ, ಒಣಗಿದೆಲೆ, ಹುಲ್ಲದಳಗಳ ಮಂಜುಹನಿ
ಹದವಾದ ಗಾಳಿ ಬೀಸುತ್ತ ಅವಳ ಹಾದಿ ಕರಗಿಸಿತ್ತು

ನವನಾಳ ಸಮೀಪಿಸಿದಂತೆ ಪರಿಮಳದ ಉಗಿಯೊಂದು
ಸುತ್ತಿಸುಳಿದಿತ್ತು ಬಯಲ ಗಾಳಿಯ ಕೂಡೆ
ರೂಪ ರೂಪವ ತಾಳಿ ಹರಿಯುತ್ತ ನದಿಯೊಂದು
ಜಾತಿಸೂತಕವಿರದ ನಕ್ಷತ್ರ ಹೂರಾಶಿ ಒಳಗೊಂಡೆ

ಲೋಕದ ಮಂದಿಗೆ ಕಥೆಯಾದವಳು
ಎದೆಯ ಲಯ ಒಂದಾಗಿ ನನ್ನೊಳಗೇ ಪದವಾಡುತಿಹಳು
ಯಾರು ಯಾರ ಒಡಲು ಸೇರಿದವ್ರೋ ಶಿವನೇ
ಕಣಸಿನ ಒಳಗಡಲು ದಿಟದ ಸವಿಗಂಡಿಹುದು
ಕುಂದದ ಬೆಳಗೊಂದ ಈ ನೆಲವು ಕಂಡಿಹುದು

ಒಡನೆ ಹುಟ್ಟಿದವಳಲ್ಲ, ಭ್ರಮೆಯಿಂದ ಬೆಳೆದವಳಲ್ಲ
ಒಡಲಲ್ಲಿ ಹುಟ್ಟಿದ ಪರಂಜ್ಯೋತಿ ನೀನು.

